**ಓ.ಎಸ್.ನಂಃ 156/2023**

**ಪಿಡಬ್ಲ್ಯೂ-2**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 14.01.2026 ರಂದು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದಃ**

ನಾನು ವಾದಿಯ ತಮ್ಮ ಎಂದರೆ ಸರಿ. ನನ್ನ ತಂದೆಗೆ ನಾಲ್ಕು ಜನ ಮಕ್ಕಳು. ನಮಗೆ ಒಟ್ಟು 10 ಎಕರೆ ಜಮೀನು ಇದೆ. ನನ್ನ ತಂದೆ ಹೆಸರು ಬಸಪ್ಪ ಎಂದರೆ ಸರಿ. 20 ಗುಂಟೆಗೆ ಮಾತ್ರ ನಾನು ಮತ್ತು ವಾದಿ ವಿಭಾಗ ಪತ್ರ ಮಾಡಿಕೊಂಡಿದ್ದೇವೆ. ಅದರ ಸರ್ವೇ ನಂಃ 3/1 ಮತ್ತು 3/23. ಸರ್ವೇ ನಂಃ 3/1 ರಲ್ಲಿ ನನ್ನ ತಂದೆಗೆ 20½ ಗುಂಟೆ ಜಮೀನು ಇತ್ತು. ನನ್ನ ತಂದೆ 10 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಪ್ರತಿವಾದಿಗಳು ನಮ್ಮ ಗ್ರಾಮದವರು ಎಂದರೆ ಸರಿ. 1ನೇ ಪ್ರತಿವಾದಿ ತಂದೆ ಹೆಸರು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ತಂದೆ ಹೆಸರು ಬಸಪ್ಪ ಎಂದರೆ ಸರಿ. ದಿಃ 15.04.1971 ರಲ್ಲಿ ನನ್ನ ತಂದೆ ಒಂದನೇ ಪ್ರತಿವಾದಿ ತಂದೆಗೆ ಸರ್ವೇ ನಂಃ 3/1 ರಲ್ಲಿ 4 ಗುಂಟೆ ಜಮೀನನ್ನು ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 18.05.1964 ರಲ್ಲಿ ನನ್ನ ತಂದೆ ಎರಡನೇ ಪ್ರತಿವಾದಿ ತಂದೆಗೆ ಸರ್ವೇ ನಂಃ 3/1 ರಲ್ಲಿ 4 ಗುಂಟೆ ಜಮೀನನ್ನು ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರಗಳ ದಿನಾಂಕದಿಂದ ಪ್ರತಿವಾದಿಗಳ ತಂದೆ ಸ್ವಾಧೀನದಲ್ಲಿ ಇದ್ದು, ಅವರ ಮರಣದ ನಂತರ ಪ್ರತಿವಾದಿಗಳ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು ಸದರಿ ಸ್ವತ್ತಿನಲ್ಲಿ ಗುಡಿಸಲು ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. ಸರ್ವೇ ನಂಃ 3/1 ಪ್ರತಿವಾದಿಗಳ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ-ರಸ್ತೆ, ಪಶ್ಚಿಮಕ್ಕೆ-ಶಿವಶಂಕರಪ್ಪರವರ ಜಮೀನು, ಉತ್ತರಕ್ಕೆ-ಶಿವಲಿಂಗಪ್ಪರವರ ಜಮೀನು ಮತ್ತು ದಕ್ಷಿಣಕ್ಕೆ-ಕೆ.ಬಿ. ಮಹದೇವಪ್ಪರವರ ಜಮೀನು ಇದೆ. ನಾನು ವಾದಿ ಜೊತೆ ಶಾಮಿಲಾಗಿ ಪ್ರತಿವಾದಿಗಳ ಸ್ವತ್ತನ್ನು ಕಬಳಿಸುವ ಸಲುವಾಗಿ ಕಂದಾಯ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಮೋಸದ ದಾಖಲೆಗಳ ಆಧಾರದ ಮೇಲೆ ಸೃಷ್ಟಿತ ವಿಭಾಗ ಪತ್ರ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮ್ಮ

ಮಾಲೀಕತ್ವಕ್ಕೆ ಒಳಪಟ್ಟಿದ್ದರೆ ನನ್ನ ಸಹೋದರರ ಜೊತೆ ಇತರ ಸ್ವತ್ತುಗಳನ್ನು ವಿಭಾಗ ಮಾಡಿಕೊಳ್ಳುತಿದ್ದೇವು ಎಂದರೆ ಸರಿಯಲ್ಲ. ದಿಃ 15.04.1971 ಮತ್ತು ದಿಃ 18.05.1964 ಗಳ ಕ್ರಯ ಪತ್ರದ ಆಧಾರದ ಮೇಲೆ ಪ್ರತಿವಾದಿಗಳೆ ದಾವಾ ಸ್ವತ್ತಿನ ಸಂಪೂರ್ಣ ಮಾಲೀಕರು ಎಂದರೆ ಸರಿಯಲ್ಲ. ನನ್ನ ಅಕ್ಕ ವಾದಿಗೆ ಅನುಕೂಲವಾಗಲಿ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ